ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

1

ಇಲಾಖೆ / ವಿಷಯ : DEPARTMENT / SUBJECT: ಮುಖ್ಯಮಂತ್ರಿ

ಪತ್ರಿಕೆಯ ಹೆಸರು : NAME OF THE NEWS PAPER: ಉದಯ ಕಾಲ    ದಿನಾಂಕ : DATE : 27/8/2020

# ಶ್ರಮ ಜೀವನದ ಘನತೆ ಸಾರಿದ ಬಸವಣ್ಣ

**ಬೆಂಗಳೂರು:** ವಿಶ್ವಗುರು ಬಸವಣ್ಣನವರ ತತ್ವ ಸಿದ್ಧಾಂತಗಳನ್ನು ಇಂದಿನ ಪೀಳಿಗೆಗೆ ಪರಿಚಯಿಸುವ ನಿಟ್ಟಿನಲ್ಲಿ ನಗರದ ಕೇಂದ್ರ ಭಾಗದಲ್ಲಿ ಅಶ್ವಾರೂಢ ಬಸವಣ್ಣನವರ ಪ್ರತಿಮೆ ನವೀಕರಿಸಲಾಗಿದೆ ಎಂದು ಮುಖ್ಯಮಂತ್ರಿ ಯಡಿಯೂರಪ್ಪ ತಿಳಿಸಿದರು.

ಪಾಲಿಕೆಯಿಂದ 1.50 ಕೋಟಿ ರೂ. ವೆಚ್ಚದಲ್ಲಿ ಮರುವಿನ್ಯಾಸ ಮಾಡಲಾಗಿರುವ ನಗರದ ಚಾಲುಕ್ಯ ವೃತ್ತದಲ್ಲಿನ ಅಶ್ವಾರೂಢ ಬಸವೇಶ್ವರ ಪ್ರತಿಮೆಯನ್ನು ಬುಧವಾರ ಲೋಕಾರ್ಪಣೆ ಮಾಡಿ, ವಿಶ್ವಗುರು ಬಸವಣ್ಣನವರು ನಾಡಿಗೆ 12ನೇ ಶತಮಾನದಲ್ಲಿ ಅನುಭವ ಮಂಟಪದ ಪರಿಕಲ್ಪನೆ ನೀಡಿ, ಸಾಮಾಜಿಕ ಕ್ರಾಂತಿಯ ಹರಿಕಾರರಾಗಿದ್ದರು. ಬಸವಣ್ಣನವರ ಚಿಂತನೆಗಳನ್ನು ನೆನಪಿಡಲು ಈ ವಿನ್ಯಾಸ ಸಹಕಾರಿಯಾಗಿದೆ. ಬಸವಣ್ಣನವರು ಕಳಬೇಡ ಕೊಲಬೇಡ, ಹುಸಿಯ ನುಡಿಯಲು ಬೇಡ ಎನ್ನುವ ವಚನದ ಮೂಲಕ ಶ್ರಮ ಜೀವನದ ಮಾರ್ಗವನ್ನು ಕಲ್ಪಿಸಿಕೊಟ್ಟರು ಎಂದರು.

ಸಚಿವ ವಿ. ಸೋಮಣ್ಣ, ಸಿ.ಟಿ.ರವಿ ಹಾಗೂ ಡಿಸಿಎಂ ಡಾ. ಅಶ್ವತ್ಥ ನಾರಾಯಣ, ಶಾಸಕರಾದ ರಿಜ್ವಾನ್ ಹರ್ಷದ್, ಎಸ್.ಆರ್. ವಿಶ್ವನಾಥ್, ವಿಧಾನ ಪರಿಷತ್ ಸದಸ್ಯ ರಮೇಶ್‌ಗೌಡ, ಮೇಯರ್ ಎಂ.ಗೌತಮ್‌ಕುಮಾರ್, ಉಪಮೇಯರ್ ರಾಮಮೋಹನ್ ರಾಜ್, ಆಡಳಿತ ಪಕ್ಷದ ನಾಯಕ ಮುನೀಂದ್ರ ಕುಮಾರ್, ಆಯುಕ್ತ ಎನ್.ಮಂಜುನಾಥ್ ಪ್ರಸಾದ್ ಇತರರಿದ್ದರು.

**ಸಿಹಿ ಹಂಚಿ ಸಂಭ್ರಮ:** ಅಶ್ವಾರೂಢ ಬಸವಣ್ಣನವರ ಪ್ರತಿಮೆ ಮರುವಿನ್ಯಾಸ ಉದ್ಘಾಟನೆ ಕಾರ್ಯಕ್ರಮದ ನಂತರ ಹಲವರು ಪರಸ್ಪರ ಸಿಹಿ ಹಂಚಿ ಸಂಭ್ರಮಿಸಿದರು. ಪ್ರತಿಮೆ ಮುಂದೆ ನಿಂತು ಸೆಲ್ಫಿ ಕ್ಲಿಕ್ಕಿಸಿಕೊಳ್ಳುವುದು ಕಂಡುಬಂತು. ಬಸವಣ್ಣನವರಿಗೆ ಜೈಕಾರ ಕೂಗಲಾಯಿತು. ಕೆಲವರು ಮಾಜಿ ಮೇಯರ್ ಗಂಗಾಂಬಿಕೆ ಪರ ಜೈಕಾರ ಕೂಗಿದರು. ಗಂಗಾಂಬಿಕೆ ಅವರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಲು ಹಲವರು ಒತ್ತಾಯಿಸಿದ್ದರು. ಶಿಷ್ಟಾಚಾರದಲ್ಲಿ ಅವಕಾಶವಿಲ್ಲದಿರುವ ಕಾರಣ ಅಧಿಕೃತವಾಗಿ ಆಹ್ವಾನಿಸಿರಲಿಲ್ಲ, ಪಾಲಿಕೆ ಆಯುಕ್ತ ಎನ್.ಮಂಜುನಾಥ್ ಪ್ರಸಾದ್ ಮಂಗಳವಾರ ತಡರಾತ್ರಿ ಮೌಖಿಕವಾಗಿ ಗಂಗಾಂಬಿಕೆ ಅವರನ್ನು ಆಹ್ವಾನಿಸಿದ್ದರಾದರೂ, ಅವರು ಕಾರ್ಯಕ್ರಮಕ್ಕೆ ಹಾಜರಾಗಲಿಲ್ಲ.



**ಬೆಂಗಳೂರಿನ ಚಾಲುಕ್ಯ ವೃತ್ತದಲ್ಲಿನ ಅಶ್ವಾರೂಢ ಬಸವೇಶ್ವರ ಪ್ರತಿಮೆ ಲೋಕಾರ್ಪಣೆ ವೇಳೆ ಸಿಎಂ ಯಡಿಯೂರಪ್ಪ ಬಸವಣ್ಣ ಅವರ ಪುತ್ಥಳಿಗೆ ಪುಷ್ಪಾರ್ಚನೆ ಮಾಡಿದರು.**